ಶ್ರೀಮತಿ ಮಾನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು). —

ಅ) ಹೌದು.

ಆ) ಇಲ್ಲ.

ಇ) ಪ್ರಸ್ತುತ ಕಟ್ಟಡವು ಪರವಾನಿಗೆ ಷರತ್ತುಗಳ ಪ್ರಕಾರ ಐ. ವಿ. ಫ್ಲೂಯಿಡ್ ಪ್ಲಾಂಟ್ ಸ್ಥಾಪಿಸಲು ಯೋಗ್ಯವಾಗಿರುವುದಿಲ್ಲ. ಆದ್ದರಿಂದ, ಕಟ್ಟಡದ ದುರಸ್ತಿಗೊಳಿಸಲು ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಅಭಿಯಂತರವರಿಂದ ನಿರೀಕ್ಷಿಸಿದೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಿನಿಸ್ಟರಿಕೆ ಮತ್ತು ಬಂದರು ಖಾತೆಯ ಸಚಿವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ

1. Audit Report of urban Development Authorty, Gulbarga for the year 1986-87

as reuired under Section 48 (5) of Karnataka urban Development Authority Act 1987.

2. Notification No. RD 141 ESR 90, dated 7-7-90

Exemption from payment of Stamp duty in fevour of Small and marrind farmers as required under Section-9 of the Karnataka Stamp Act 1957.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Notification No. SWL.73 LMW. 90, dated 10-7-1990

ಇದು ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್‌ನಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಸಂಬಂಧ ಪಟ್ಟದ್ದಾಗಿದೆ. ಅಲ್ಲಿ ಕೆಲಸ ಮಾಡತಕ್ಕವರನು ಲೇಬರ್ ಎಂದು ತಿಳಿದುಕೊಳ್ಳಬಾರದು ಅವರು ಡಿಗ್ನಿಫೈಡ್ ಆಗಿರತಕ್ಕವರು ಮಹಾತ್ಮಾ ಗಾಂಧಿಯವರ ತತ್ವಕ್ಕೆ ಅನುಗುಣವಾಗಿ ಅವುಗಳನ್ನು ಫಾಲೋ ಮಾಡಿಕೊಂಡು ಬರತಕ್ಕವರು. ಅವರನ್ನು ಮಿನಿಮಂ ವೇಜಸ್ ಆಕ್ಟ್‌ನಿಂದ ವಿನಾಯಿತಿ ಕೊಡುವ ಬಗ್ಗೆ ಇದನ್ನು ಹೊರಡಿಸಲಾಗಿದೆ. ಖಾದಿಯೊಳಗೆ ಬರತಕ್ಕಂಥ ಹಣ ಬಹಳ ಕಡಿಮೆ ಇದಕ್ಕೆ ಮಿನಿಮಮ್ ವೇಜಸ್ ಆಕ್ಟ್‌ನ್ನು ಎಕ್ಸಮ್ಪ್ಟ್ ಮಾಡಿದ್ದೇವೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಬಿ. ಎಂ. ಇದಿನಬ್ಬ.—ಘಟಪ್ರಭಾ ನದಿಯಿಂದ ಧೂಪದಾಳ ಅಣೆಕಟ್ಟಿನವರೆಗೆ ನೀರಾವರಿ ಪರವಾನಿಗೆ ಕೊಡುವ ಬಗ್ಗೆ ಅರ್ಜಿಯನ್ನು ಸಭೆಗೆ ಸಲ್ಲಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್.—ಕರ್ನಾಟಕ ಕರಾವಳಿ ಪ್ರದೇಶದಲ್ಲಿ ಕೃಷಿ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಗಳನ್ನೊಪ್ಪಿಸಲಾಯಿತು.